ಈ ವಾರದ ಭವಿಷ್ಯ

ಮೇಷ

ಕೈಗೊಂಡ ಕಾರ್ಯಗಳು ಕೈಗೂಡುವುವು. ಸಾಂಪತ್ತಿಕ ಸ್ಥಿತಿ ಉತ್ತಮಗೊಳ್ಳುವುದು. ಸ್ನೇಹಪರ ಜನ ಸಹಾಯ ಭೂತಿ. ಆದಿತ್ಯ ಹೃದಯ ಪಾರಾಯಣ ಮಾಡುವುದು ಒಳ್ಳೆಯದು.

ವೃಷಭ

12 ನೇ ಕಡೆ ರವಿ, ಜನ್ಮದಲ್ಲಿ ಶನಿ. ಗುರು 2 ನೇ ಕಡೆ ಕುಜ, ಹೀಗಿರುವಾಗ ಅಂತಹ ಉತ್ತಮ ಫಲ ಹೇಗೆ ದೊರೆತೀತು. ನವಗ್ರಹಾರಾಧನೆಯನ್ನು ಮಾಡಿ ಶುಭ.

ಮಿಥುನ

ಅಧಿಕಾರ ವರ್ಗಗಳಿಂದ ಅನುಕೂಲಗಳುಂಟು. ಅಂಗಾರಕನು ಜನ್ಮದಲ್ಲಿರುವುದರಿಂದ ತೊಗರಿ ಬೇಳೆ ದಾನ ಮಾಡುವುದು ಉತ್ತಮ. ಖರ್ಚು ಹೆಚ್ಚಾಗಿರುವುದು. ಜನರಲ್ಲಿ ಸ್ವಲ್ಪ ಮನಸ್ತಾಪವಾಗಬಹುದು.

ಕರ್ಕಾಟಕ

ಬಂಧು ಮಿತ್ರರ ಸನ್ಮಾನವಿದೆ ದೇಹಾರೋಗ್ಯ ಕೆಡುವುದು. ಮನಸ್ಸಿಗೆ ಅನೇಕ ವಿಧದ ಚಿಂತಾಜಾರಾಗಬಹುದು. ಉತ್ತಮ ಜನರಿಂದ ಗೌರವವಿದೆ.

ಸಿಂಹ

ನೀವು ಗ್ರಾಸಸಿಂಹವಾಗಿ ಹೋಗಿದ್ದಿರಿ. ಇನ್ನು ಮೇಲೆ ವನರಾಜನಾಗುವಿರಿ. ಸ್ವಲ್ಪ ಚೇತರಿಸಿಕೊಳ್ಳುವಿರಿ, ಹಣದ ತಾಪತ್ರಯ ತಗ್ಗುವುದು. ಸಂಸಾರ ಸುಖಮಯವಾಗಿರುವುದು.

ಕನ್ಯಾ

ಯಕ್ಷ ಕಾರ್ಯ ಸಿದ್ಧಿಸುವುದು. ದುಡ್ಡಿನ ತಾಪತ್ರಯವಿಲ್ಲ. ಸಂಕಟಕಷ್ಟರಲ್ಲಿ ಒಳ್ಳೇ ಸನ್ಮಾನ.

ತುಲಾ

ದೇವರೇ ಹಿಂಗೆ ಖರ್ಚು ಹೆಚ್ಚಿದರೆ ಎಲ್ಲಿಂದ ತರುವುದು ಎಂಬ ಪಲ್ಲವಿ ಹಾಡುವಿರಿ. ಮನೆ ಜನರಲ್ಲಿ ಸಲ್ಪ ಚಿಕ್ಕ ಪುಟ್ಟ ಜಗಳಗಳಾದೀತು ಹುಷಾರಾಗಿ ವರ್ತಿಸಿ. ಅಧಿಕಾರ ವರ್ಗದಿಂದ ಅನುಕೂಲವಿದೆ.

ವೃಶ್ಚಿಕ

ಸಾಧಾರಣ ಫಲ, ಧನಾಗಮಕ್ಕೇನು ಆತಂಕವಿಲ್ಲ. ಹೆಚ್ಚು ಖರ್ಚು. ಚಿಕ್ಕಪುಟ್ಟ ಮನಸ್ತಾಪಗಳಿಗೂ ಅವಕಾಶವಿದೆ.

ಧನು

ನಿಮ್ಮ ಸ್ಥಿತಿಗತಿಗಳು ಉತ್ತಮಗೊಳ್ಳುತ್ತಿವೆ. ಸಂಸಾರದಲ್ಲಿ ಸ್ವಲ್ಪ ಮನಸ್ತಾಪವಿವೆ. ಧನಾಗಮನಕ್ಕೆ ಅವಕಾಶವಿದೆ.

ಮಕರ

ನಿಮಗೇನೂ ಅಂಥ ಪ್ರಯೋಜನ ಕಾಲವಲ್ಲ ಸಿಕ್ಕಿದ್ದರಲ್ಲಿ ತೃಪ್ತಿ ಪಟ್ಟುಕೊಂಡು ಕಾಲವನ್ನು ತಳ್ಳುವುದು ಶ್ರೇಯಸ್ಕರ.

ಕುಂಭ

ರಾಜಕೀಯ ವಿಷಯದಲ್ಲಿ ಅನುಕೂಲ, ಬಂಧು ಬಳಗದ, ಉಪಾಧಿ ಉತ್ಪತ್ತಿಗಿಂತ ಖರ್ಚು ಹೆಚ್ಚು.

ಚಲನಚಿತ್ರ ಪ್ರಪಂಚ

ಸಿನಿಮಾ ನಟ "ಪೃಥ್ವಿರಾಜ್"

ಈತನ ಭವಿಷ್ಯವನ್ನು ನೋಡುವುದಾದರೆ ಆಶ್ಚರ್ಯವಾಗುತ್ತೆ. ಈತನು ಒಬ್ಬ ಪೋಲೀಸ್ ಸಬ ಇನ್ಸ್‌ಪೆಕ್ಟರರ ಮಗ. ಪೆಷಾವರಿನಲ್ಲಿ ವಿಶ್ವವಿದ್ಯಾನಿಲಯದ ಪರೀಕ್ಷೆಯನ್ನು ಮುಗಿಸಿದ್ದಾನೆ. ಟೆನ್ನಿಸ್ ಆಟದಲ್ಲಿ ಪ್ರಖ್ಯಾತಿ ಹೊಂದಿದವನು. ಈತನು ನಟನಾಗುವನೆಂದು ಯಾರೂ ಯೋಚಿಸದಿದ್ದರೂ. ತಾನು ಪಾತ್ರ ಅದರಲ್ಲಿ ಮಯವಾಗಿದ್ದನು. ಈತನು ಓದುತ್ತಿದ್ದ ಕಾಲೇಜಿನಲ್ಲಿನ ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದನು. ಒಂದಾನೊಂದು ನಾಟಕ ಪ್ರದರ್ಶನದಲ್ಲಿ ಪಾತ್ರಸಹಿಸಿದಾಗ, ಅಧ್ಯಕ್ಷರು ಆತನನ್ನು ಒಹಳವಾಗಿ ವಂದಿಸಿದರು. ವಿಶ್ವವಿದ್ಯಾನಿಲಯದ ಪರೀಕ್ಷೆ ಮುಗಿದೊಡನೆ ಬೊಂಬಾಯಿಗೆ ರೈಲುಹತ್ತಿದನು.

ಬೊಂಬಾಯಿನ ಕಾಶ್ಮೀರ್ ಹೋಟಲಿನಲ್ಲಿದ್ದ ಆತನ ಸ್ನೇಹಿತರಾದವರು ಈತನಿಗೆ ಇಂಪೀರಿಯಲ್ ಸ್ಟೂಡಿಯೋವಿಗೆ ದಾರಿತೋರಿಸಿದರು. ಈತನು ಮೂರನೆಯ ದಿನ ಸ್ಟ್ಯಾಡಿಯೋ-ಆಸಾಮಿ ಹಿಡಿಯಲು, ಅಲ್ಲಿ ಈತನಿಗಿಂತ ಮಿಗಿಲಾಗಿರುವವರು ಬಾಗಿಲಲ್ಲಿರುವುದನ್ನು ನೋಡಿ ಧೈರ್ಯವಾಡಿ ಒಳಹೊಕ್ಕನು. ಆದರೇನು! ಸ್ಟೂಡಿಯೋ ಪ್ರೊಪ್ರೈಟರು ಈತನನ್ನು ಎಕ್ಸ್‌ಟ್ರಾ ಆಗಿ ಸೇರಿಸಿಕೊಂಡರು. ತಂತೂ ಚಿತ್ರಗಳ ಮೇಲೆ ಚಿತ್ರಗಳಲ್ಲಿ ಕಾಣತೊಡಗಿದನು. ನಂತರ "ಅಲಂಆರಾ" ಎಂಬ ಒಂದು ಚಿತ್ರದಲ್ಲಿ ಪ್ರಖ್ಯಾತಿಗೊಂಡನು. ಹೀಗಿರಲು ಸ್ವಲ್ಪ ದಿನಗಳಲ್ಲಿಯೇ ಕಲ್ಕತ್ತ ನ್ಯೂ ಥಿಯೇಟರ್ಸ್‌ನಲ್ಲಿ ಸೇರಿದನು. 1940 ರಲ್ಲಿ "ವಿದ್ಯಾಪತಿ" ಚಿತ್ರದಲ್ಲಿ ಅಭಿನಯಿಸಿ ಅನಂತರ 1940 ರಲ್ಲಿ ಸಿಕ್ಕೋರನರ ಕೆಲವು ಚಿತ್ರಗಳಲ್ಲಿಯೂ, ರಣಜಿತ್ ಕಂಪನಿಯ ಚಿತ್ರಗಳನ್ನೂ ಅಭಿನಯಿಸಿದನು. ಅಲ್ಲದೆ ವಾದಿಯಾರವರ ಹಿಂದಿ, ಇಂಗ್ಲಿಷ್ ಭಾಷೆಗಳ ಚಿತ್ರವಾದ "ರಾಜನರ್ತಕಿ" ಮತ್ತು ಮಿನರ್ವ ರವರವರ "ಅಲೆಗ್ಜಾಂಡರ್ ದಿ ಗ್ರೇಟ್" ಚಿತ್ರಗಳಲ್ಲಿ ಅಭಿನಯಿಸಿದನು. ಈಗ ಸಾಲಿಮಾರ್ ರವರ ಚಿತ್ರವಾವ "ವಿಕ್ರಾತ್" ಎಂಬುದರಲ್ಲಿ ಅಭಿನಯಿಸುತ್ತಿದ್ದಾನೆ.

ಈತನು ಇನ್ನೂ ಪ್ರಖ್ಯಾತಿ ಹೊಂದಿ ಯುದ್ಧ ಮುಗಿದ ಕೂಡಲೆ ಅಮೆರಿಕಾದ ಹಾಲಿವುಡ್ಡಿಗೆ ಹೋಗಲು ಕೆಲವು ನಟರಂತೆ ತಾನು ಕಾತುರನಾಗಿರುವುದನ್ನು ತಿಳಿಸುದೆನು ಇನ್ನೂ ಆಯುರಾರೋಗ್ಯಗಳನ್ನು ಹೆಚ್ಚಿಸಲೆಂದು ಆಶಿಸೋಣ.

ಮಾನ

ಸೂರ್ಯ, ಅಂಗಾರಕರ ಜಪ ನಡೆಸಿ. ನಿಮಗೊದಗುವ ಅನುಕೂಲಗಳಲ್ಲಿ ಸ್ವಲ್ಪ ತೊಂದರೆಗಳೂ ನಷ್ಟಗಳೂ ಸೇರಿವೆ. ತನು ಮನ್ಮಹಾರಾಯನ ಬೆಂಬಲ ಚೆನ್ನಾಗಿದೆ.

ಯುದ್ಧ ಸಮಾಚಾರ

ಬರ್ಮಾದಲ್ಲಿ ಜಪಾನೀ ಸೈನ್ಯಗಳು ಪೂರ್ವದ ಕಡೆಯಿಂದ ಪಶ್ಚಿಮದ ಕಡೆಗೆ ತಿರುಗಿವೆ. ಈ ರೀತಿ ಜಪಾನೀಯರು ತ್ವರಿತವಾಗಿ ಮುಂದೆ ನುಗ್ಗಿ ಹೋಗುವುದಾದರೆ, ಪೂಂಡಲೆಗೂ, ಲಾಷಿಯೋವಿಗೂ ರಸ್ತೆಯನ್ನು ಕತ್ತರಿಸಿದಂತಾಗುವುದು.

ಂ ಂ ಂ

ಬರ್ಮಾದಲ್ಲಿನ ಷಾನ್ ಸಂಸ್ಥಾನಗಳ ರಾಜಧಾನಿಯಾದ ಟಾಂಗ್‌ಜಿ ಕಡೆಗೆ ಪುನಃ ಜಪಾನಿ ಸೈನ್ಯಗಳು ಮುನ್ನುಗ್ಗಿ ಬರುತ್ತಿವೆ.

ಂ ಂ ಂ

ಬರ್ಮಾ ರಸ್ತೆಯು ಈಗ ಬಹಳ ಅಪಾಯ ಸ್ಥಿತಿಯಲ್ಲಿದ್ದೆ ಎಂದು ಚೀನೀ ಮಿಲಿಟರಿ ಅಧಿಕಾರಿ ತಿಳಿಸಿದರು.

ಂ ಂ ಂ

ಉತ್ತರದಲ್ಲಿ ಫಿನ್ನಿಷ್ ರಣಕ್ಷೇತ್ರದಲ್ಲಿ ರಷ್ಯನರ ದೃಢವಾದಂತಹ ಧಾಳಿಗಳು ಬಲವಾಗುತ್ತಿವೆ.

ಂ ಂ ಂ

ರೋಸ್ಟಾಕ್ ಬಂದರಿನ ಮೇಲೆ ಪುನಃ ಬ್ರಿಟಿಷ್ ವಿಮಾನಗಳು ಧಾಳಿ ನಡೆಸಿ ಅಲ್ಲಿನ ಸಿರೋಡ್ರೋಂಗಳ ಮೇಲೂ, ಹೈಂಕಲ್ ವಿಮಾನಗಳ ಕಾರ್ಖಾನೆಗಳ ಮೇಲೂ ಬಾಂಬು ಹಾಕಿ ಬಹಳ ನಷ್ಟಪಡಿಸಿದವು.

ಮೆಂತ್ಯ (ಲೇಖಕರು— ಓಂ)

ಇದು ದೇಹಕ್ಕೆ ಮೃದುತ್ವವನ್ನುಂಟುಮಾಡುವುದು. ಅಡಿಗೆಯಲ್ಲಿ ಇದನ್ನು ಉಪಯೋಗಿಸಿದಲ್ಲಿ ಆಹಾರಕ್ಕೆ ಒಂದು ಸುವಾಸನೆಯು ಒದ್ದುವುದು. ಶಿಗೇಕಾಯಿ ಪುಡಿಯೊಂದಿಗೆ ಮೆಂತ್ಯದಹಿಟ್ಟನ್ನು ಕಲಸಿ ಉಪಯೋಗಿಸಿದ್ದಲ್ಲಿ ಕಣ್ಣುಗಳಿಗೆ ತಂಪೂ, ಕೂದಲುಗಳಿಗೆ ಕಾಂತಿಯೂ ಒದಗುವುದು.

ರಕ್ತ ವಿರೇಚನಗಳಾಗುತ್ತಿದ್ದಲ್ಲಿ ಹೆಚ್ಚಾಗಿ ಮೆಂತ್ಯವನ್ನು ಸೇರಿಸಿರುವ ದೋಸೆಗಳನ್ನು ಮಿತವಾಗಿ ಸೇವಿಸಿದಲ್ಲಿ ವಿರೇಚನೆಗಳು ನಿಲ್ಲುವವು. ಹೊಟ್ಟೆಯ ನೋವಿನಲ್ಲಿಯೂ ಇದು ಗುಣಕಾರಿಯಾಗಿರುತ್ತದೆ.

ಲೋಳೆಸರದ ಪಟ್ಟೆಯಲ್ಲಿ ಸಂದುಗಳನ್ನು ಮಾಡಿ ಅವುಗಳಲ್ಲಿ ಮೆಂತ್ಯದ ಕಾಳುಗಳನ್ನು ಸೇರಿಸಿ ಲೋಳೆಸರದ ರಸದಲ್ಲಿ ಎರಡು ದಿನಗಳು ನೆನೆಯುವಂತೆ ಇಟ್ಟಿರತಕ್ಕದ್ದು. ತರುವಾಯ ಅವನ್ನು ಬೇರೆಯಾಗಿ ತೆಗೆದು ನುಣ್ಣಗೆ ಅರೆದು ಎಳ್ಳಿನ ಎಣ್ಣೆ ಅಥವಾ ಕೊಬ್ಬರಿ ಎಣ್ಣೆಯಲ್ಲಿ ಹಾಕಿ ಚೆನ್ನಾಗಿ ಕಾಯಿಸಿ ಆ ಎಣ್ಣೆಯನ್ನು ದಿನಂಪ್ರತಿ ತಲೆಗೆ ಸವರಿಕೊಳ್ಳುತ್ತಿದ್ದಲ್ಲಿ ಕೂದಲು ಸೊಂಪಾಗಿ ಬೆಳೆಯುವದಲ್ಲದೆ ಅನೇಕ ಶಿರೋವ್ಯಾಧಿಗಳು ನಿವಾರಣೆಯಾಗುವುವು.

ಅಂತ್ಯದವರೆಗೂ ಮನುಷ್ಯನಿಗೆ ಸತ್ಯವಾಗಿಯೂ ಮೆಂತ್ಯದ ವಿನಹಾ ಗತ್ಯಂತರವಿಲ್ಲ.

ವಿನೋದಲಹರಿ

(ಲೇ:—ಎಂ.ಎಸ್. ಕುಸುಮ ಮೈಸೂರು.)

ಗುರು—ನೀವೆಲ್ಲಾ ಪ್ರತಿನಿತ್ಯವೂ ದೇವರ ಧ್ಯಾನ ಮಾಡಬೇಕು ಹಾಗೆ ಮಾಡಿದರೆ ದೇವರು ನಿಮ್ಮ ಕೋರಿಕೆಗಳನ್ನೆಲ್ಲಾ ನೆರವೇರಿಸುತ್ತಾನೆ.

ಶಿಷ್ಯ—ಹಾಗೆ ನಮ್ಮ ಕೋರಿಕೆಗಳನ್ನೆಲ್ಲಾ ದೇವರು ನೆರವೆರಿಸುವ ಹಾಗಿದ್ದರೆ ನೀವು ಎಷ್ಟು ಮುಂಜೆ ಯಮ ಲೋಕಕ್ಕೆ ಹೋಗುತ್ತಿದ್ದಿರಿ

o o

ಗುರು—ಲೋ ರಾಮು ಎಡಗಡೆಯಿಂದ ಒರೆಯುಎಯಲ್ಲ ತುರುಕರ ಹಾಗೆ.

ರಾಮು—ಸಾರ್ ನೀವು ?

ನಾಣಿ—ಲೋ ನಾವು ತುರುಕರು ಅವರು ಎಮ್ಮೆ ಕರು.

Sri Parashuram Hall

ನಮ್ಮಲ್ಲಿ ಎಲ್ಲಾ ತರಹ ಕೋಟಿಂಗ್ಸ್, ಸರಟಿಂಗ್ಸ್ ಟ್ರವಲ್ಸ್, ಅಂಪ್ರೆಲಾಸ್ ಮತ್ತು ಎಲ್ಲಾ ಸೈಜು ಕಸ್ಟಂ ಹಾಸಿಗೆ ದಿಂಬುಗಳು ಸುಲಭ ಬೆಲೆಗೆ ದೊರೆಯುತ್ತವೆ. ಮತ್ತು ಬಟ್ಟೆಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಅಂದವಾಗಿಯೂ ಮನಸ್ಸು ಒಪ್ಪುವಂತೆಯೂ ಹೊಲೆದು ಕೊಡುತ್ತೇವೆ

ವಿಳಾಸ:— ಶ್ರೀ ಪರಶುರಾಂ ಹಾಲ್
ಸಯ್ಯಾಜಿರಾವ್ ರೋಡ್, :: ಮೈಸೂರು,
ಫೋ—ಧೋಂಡೋಜಿರಾವ್ ಅಂಡ್ ಸನ್ಸ್

Sri
Mahalakshmi Hall

Tailors
Outfitters
Breeches Specialists
Sayyaji Rao Road, Mysore

ನಿಮ್ಮ ಫೌಂಟೆಪೆನ್ನುಗಳ
ಆಯುಸ್ಸು ಪೂರೈಸಿತೆ!

ನಮ್ಮಲ್ಲಿಗೆ ಬಂದರೆ ಪುನರುಜ್ಜೀವನ ಕೊಡಲ್ಪಡುತ್ತೆ. ಎಲ್ಲಾ ಫೌಂಟೆನ್ಪೆನ್ನು ನಿಬ್ಬುಗಳಿಗೂ ಅವುಗಳ ಸ್ಪೇರ್‌ಪಾರ್ಟ್ಸ್‌ಗಳಿಗೆ ನಮ್ಮಲ್ಲಿಗೆ ಬನ್ನಿ.

ಮೊಕ್ತಾರ್ ಅಂಡ್ ಕೋ.
ಲ್ಯಾನ್ಸ್‌ಡೌನ್ ಬಜಾರ್. ಮೈಸೂರು.

Edited, Printed & published by M.S. Krishna Rao, at the Satyavadi Press Chamaraja Agrahar, Mysore.

ಅಕ್ಕರ

ಸಾಮಾಜಿಕ
— ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. 7 ಆಣೆ ಸ್ಟಾಂಪು ಕಳುಹಿಸಿದರೆ ಪುಸ್ತಕವನ್ನು ಕಳುಹಿಸುತ್ತೇವೆ. ಸತ್ಯವಾದಿ ಆಫೀಸ್. ಮೈಸೂರು

For Good Printing
CONSULT
Saraswati
Printing Press
Lansdowne Buildings, Mysore

When you desire to buy or sell Houses & Sites
Govt. Loan Bonds
Shares of Companies
apply to
The Satyavadi Ltd., Mysore

always consult
The Oracle
Weekly (Regd)
for expert comments and exhaustive Forum, on I W C
— Published Every Wednesday —
Subscription Rates.
Annual Rs 4, Half-yearly Rs 2
THE ORACLE
68 Commercial Street, Bangalore

For Luscious Menu and
Fine Coffee and Tea
Sastry's Coffee Rooms
Chamarajapuram, Mysore

ಸತ್ಯವಾದಿ ವಾರಪತ್ರಿಕೆಗೆ
— ಚಂದಾದಾರರಾಗಿರಿ —

ವಾರ್ಷಿಕಚಂದಾ ಅಂಚೆವೆಚ್ಚಸೇರಿ ರೂ 1-8-0
3 ತಿಂಗಳಿಗೆ 0-8-0. ವಿ. ಪಿ. ಪದ್ಧತಿ ಇಲ್ಲ.

—— ಆರ್ಡರ್ ಫಾರಂ ——

ಸ್ವಾಮಿ,
ತಮ್ಮ ವಾರಪತ್ರಿಕೆಗೆ ನನ್ನನ್ನು ವಾರ್ಷಿಕ ಚಂದಾದಾರನನ್ನಾಗಿ ರಿಜಿಸ್ಟರ್ ಮಾಡಿಕೊಳ್ಳಬೇಕಾಗಿ ಕೋರುತ್ತೇನೆ. ಅದಕ್ಕಾಗಿ ವಾರ್ಷಿಕ ಚಂದಾವಾದ ರೂ 1-8-0 ಯನ್ನು ಮನಿಯಾರ್ಡರ್ ಅಥವಾ ಪೋಸ್ಟಲ್‌ಆರ್ಡರ್ ಮೂಲಕ ಇದರೊಂದಿಗೆ ಹಣ ರವಾನಿಸಿದ್ದೇನೆ.
ಹೆಸರು
ವಿಳಾಸ

ಹಿಂದುಸ್ಥಾನದ



ಶುದ್ಧ ಗಂಧದ ಸಾಬೂನು
ಮೈಸೂರ್ ಸ್ಯಾಂಡಲ್‌ಸೋಪ್

ಗವರ್ನಮೆಂಟು ಸೋಪ್ ಫ್ಯಾಕ್ಟರಿ, ಬೆಂಗಳೂರು